ಕಾರಣವೊ ಅಥವಾ ಲಾಕ್‌ಡೌನ್ ಕಾರಣವೊ? ಈ ಇಂಪಾರ್ಟೆಂಟ್ ಪ್ರಶ್ನೆಯನ್ನು ಯಾವ ಚಾನೆಲ್ಲುಗಳೂ ಚರ್ಚೆಗೆ ಎತ್ತಿಕೊಂಡೇ ಇಲ್ಲ.

'ಅಷ್ಟೊಂದು ಸಾವಿಗೆ ಚಾನೆಲ್‌ಗಳೇ ಕಾರಣ ಅಂತ ಅದ್ಯಾರೊ ಸೈಕಾಲಜಿಸ್ಟ್ ಹೇಳಿದಾರಲ್ರೀ! ಇನ್‌ಫೋಡೆಮಿಕ್ ಈಸ್ ದಿ ಬಿಗೆಸ್ಟ್ ಎಪಿಡೆಮಿಕ್ ಅಂತ ವಿಶ್ವ ಆರೋಗ್ಯ ಸಂಸ್ಥೆನೂ ಹೇಳಿದೆ. ನಡೀರಿ ಮುಂದಕ್ ಹೊಗೋಣ' ಎನ್ನುತ್ತ ನನ್ನಾಕೆ ನನ್ನನ್ನು ಎಚ್ಚರಿಸಿದಾಗ ನಾನು ಗಕ್ಕೆಂದು ನಿಂತೆ. ಇದ್ದಕ್ಕಿದ್ದಂತೆ ದೋಸೆಯ ಪರಿಮಳ ಆ ಜನಜಂಗುಳಿಯಲ್ಲೂ ಸೂಸಿ ಬಂತು. ಅರೆ! ಈ ಊರಲ್ಲಿ ದೋಸೆ? ಫ್ರೆಂಚರು ಕಟ್ಟಿ ಬೆಳೆಸಿದ ಈ ಪಟ್ಟಣದಲ್ಲಿ ದೋಸೆ ಇಡ್ಲಿ ಹೊಟೆಲ್‌ಗಳು ಕಮ್ಮಿ; ತೀರಾ ಕಮ್ಮಿ. ಬದಲು ಅಲ್ಲಲ್ಲಿ ಬರೀ ಬೇಕರಿಗಳು ಕಂಡಿದ್ದವು, ಪ್ಯಾಟ್ಟೀಸ್, ಪೇಸ್ಟ್ರಿ, ಪಫ್, ಕೇಕ್, ಕ್ರೊಯಿಸ್ಸಾಂಟ್, ಐಸ್‌ಕ್ರೀಮ್ ಇಂಥ ಟೇಕವೇಗಳದ್ದೇ ರಾಜ್ಯವಾಗಿತ್ತು. ಆದರೆ, ಇದೇನಿದು ದೋಸೆಯ ಪರಿಮಳ?

ನಾನು ಮೂಗರಳಿಸಿದೆ. ಶ್ರೀಪಡ್ರೆ ನೆನಪಾದರು. ರಸ್ತೆಯಲ್ಲಿ ಸಾಗುತ್ತಿದ್ದ ಅಷ್ಟೊಂದು ಸೈಕಲ್‌ಗಳ ಮಧ್ಯೆ ಬೈಕ್‌ಗಳನ್ನು ನೋಡತೊಡಗಿದೆ. ಅವುಗಳ ಹೊಗೆ ಕೊಳವೆಗಳನ್ನು ಗಮನಿಸತೊಡಗಿದೆ. ದೋಸೆ ವಾಸನೆ ಅಲ್ಲಿಂದ ಬರುತ್ತಿದೆಯೆ? ಪೆಟ್ರೋಲಿನ ಬೆಲೆ ಈಗ ನೂರರ ಗಡಿ ದಾಟಿದ್ದರಿಂದ

